ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

# ಕನ್ನಡ ಅಭ್ಯಾಸ ಪುಸ್ತಕ

## ಭಾಗ–2

## (ಪರಿಷ್ಕೃತ)

# 4

## ನಾಲ್ಕನೆಯ ತರಗತಿ

## 2026–27

ಹೆಸರು : ..........................................................................

ಶಾಲೆಯ ಹೆಸರು : ..........................................................................

..........................................................................

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ

100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ,

ಬೆಂಗಳೂರು – 560 085.

©KTBS
NOT TO BE REPUBLISHED

# ಆಶಯ ನುಡಿ

"ಶ್ರೇಷ್ಠ ಶಿಕ್ಷಣ ಕೇವಲ ಮಾಹಿತಿಯನ್ನು ಒದಗಿಸುವುದಿಲ್ಲ, ಬದಲಿಗೆ ಅಸ್ತಿತ್ವದಲ್ಲಿರುವ ಎಲ್ಲಾದರೊಂದಿಗೆ ಸಾಮರಸ್ಯದಿಂದಿರುವುದನ್ನು ಕಲಿಸುತ್ತದೆ".

**– ರವೀಂದ್ರನಾಥ್ ಠಾಗೋರ್**

ಪ್ರತಿ ರಾಷ್ಟ್ರದ ಅಭಿವೃದ್ಧಿಯು ಅಲ್ಲಿನ ಶಿಕ್ಷಣದ ಅಭಿವೃದ್ಧಿಯನ್ನು ಅವಲಂಬಿಸಿರುತ್ತದೆ. ಶಿಕ್ಷಣದ ಗುಣಮಟ್ಟ ಹೆಚ್ಚಿಸುವ ನಿಟ್ಟಿನಲ್ಲಿ ಕಲಿಕೆಯಲ್ಲಿ ನಿರೀಕ್ಷಿತ ಪ್ರಗತಿ ಸಾಧಿಸಲು ವಿದ್ಯಾರ್ಥಿಗಳಲ್ಲಿ ಕಲಿಕಾ ಅನುಭವಗಳಿಂದ ಉಂಟಾದ ಕಲಿಕಾ ಫಲವನ್ನು ನಿರೀಕ್ಷಿಸಲಾಗುತ್ತದೆ. ಇದಕ್ಕಾಗಿ ಶಾಲಾ ಶಿಕ್ಷಣ ಇಲಾಖೆ ನಿರಂತರವಾಗಿ ಹಲವಾರು ಉಪಕ್ರಮಗಳನ್ನು ಹಮ್ಮಿಕೊಂಡು ಅನುಷ್ಠಾನ ಮಾಡುತ್ತಿದೆ.

2021ನೇ ಸಾಲಿನಲ್ಲಿ DSERT ಕಛೇರಿ ವತಿಯಿಂದ ಸಿದ್ದಪಡಿಸಿರುವ 4 ರಿಂದ 9ನೇ ತರಗತಿಯ ಕನ್ನಡ ಭಾಷೆ, ಆಂಗ್ಲ ಭಾಷೆ ಹಾಗೂ ಗಣಿತ ವಿಷಯಗಳ ಅಭ್ಯಾಸ ಪುಸ್ತಕ ಭಾಗ–1 ಮತ್ತು ಭಾಗ–2 ನ್ನು ಪರಿಶೀಲಿಸಿ, ಪರಿಷ್ಕರಿಸಿ ಹಾಗೂ ಹೊಸ ಪಠ್ಯ ಪುಸ್ತಕಗಳಿಗನುಗುಣವಾಗಿ ರಚಿಸಿ, ವಿದ್ಯಾವಿಕಾಸ ಯೋಜನೆಯಡಿ 2026–27ನೇ ಸಾಲಿಗೆ ಅನ್ವಯವಾಗುವಂತೆ ಸಿದ್ಧಪಡಿಸಿದೆ. ಮಕ್ಕಳ ಸಾಮರ್ಥ್ಯಾಧಾರಿತ ಕಲಿಕೆಗೆ ಅಗತ್ಯವಿರುವ ಕಲಿಕಾ ಫಲಗಳನ್ನು ಸಾಧಿಸಲು ಮತ್ತು ಕಲಿಕೆಯನ್ನು ದೃಢಗೊಳಿಸಲು ಅನುಕೂಲವಾಗುವಂತೆ ಹಾಗೂ ವಿದ್ಯಾರ್ಥಿಗಳ ವೈಯಕ್ತಿಕ ಆಸಕ್ತಿಯನ್ನು ಗಮನದಲ್ಲಿಟ್ಟುಕೊಂಡು 'ಅಭ್ಯಾಸ ಪುಸ್ತಕ' ಗಳನ್ನು ರೂಪಿಸಲಾಗಿದೆ.

ಕಲಿಕಾಫಲ ಆಧಾರಿತ ಕಲಿಕೆಯನ್ನು ದೃಢೀಕರಿಸಿಕೊಳ್ಳಲು ಪಠ್ಯಪುಸ್ತಕಕ್ಕೆ ಪೂರಕವಾಗಿ ಹೆಚ್ಚಿನ ಅಭ್ಯಾಸಗಳನ್ನು ಒಳಗೊಂಡಿರುವ ಈ ಅಭ್ಯಾಸ ಪುಸ್ತಕಗಳನ್ನು ಸಂಪನ್ಮೂಲ ಶಿಕ್ಷಕರಿಂದ ರಚಿಸಿ, ಪರಿಶೀಲಿಸಿ, ಪರಿಷ್ಕರಣೆ ಮಾಡಿದ್ದು ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಪೋಷಕರು ಇದನ್ನು ಸಮರ್ಥವಾಗಿ ಬಳಸಿಕೊಳ್ಳುವುದು. ಮಕ್ಕಳ ಕಲಿಕಾ ಸಾಧನೆಯ ಮಟ್ಟವನ್ನು ಹೆಚ್ಚಿಸಲು ಎಲ್ಲರೂ ನಿರಂತರವಾಗಿ ಪ್ರಯತ್ನಿಸೋಣವೆಂದು ಆಶಿಸುತ್ತೇನೆ.

ಅಭ್ಯಾಸ ಪುಸ್ತಕಗಳ ರಚನೆ, ಪರಿಶೀಲನೆ ಮತ್ತು ಪರಿಷ್ಕರಣೆಯಲ್ಲಿ ಸಹಕರಿಸಿದ ಎಲ್ಲಾ ಸಂಪನ್ಮೂಲ ವ್ಯಕ್ತಿಗಳಿಗೆ ಅಭಿನಂದನೆಗಳು.

**ಶ್ರೀ. ವಿಕಾಸ್ ಕಿಶೋರ್ ಸುರಳ್ಕರ್., ಭಾ.ಆ.ಸೇ.,**
ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ,
ನೃಪತುಂಗ ರಸ್ತೆ, ಬೆಂಗಳೂರು.

@KTBS NOT TO BE REPUBLISHED

# ಶುಭ ಹಾರೈಕೆ

## "ಶಿಕ್ಷಣಕ್ಕೆ ದತ್ತ ಅವಕಾಶ ನೀಡಿ, ಅದನ್ನು ನೆರವೇರಿಸುವ ಕರ್ತವ್ಯ ನಮ್ಮದು"

**–ಮಹಾತ್ಮಾ ಗಾಂಧೀಜಿ**

ಮಹಾತ್ಮಾ ಗಾಂಧೀಜಿಯವರ ಆಶಯದಂತೆ ಮೇಲಿನ ಹೇಳಿಕೆಯು ಇಂದಿಗೂ ಪ್ರಸ್ತುತವಾಗಿದ್ದು, ಪ್ರಸಕ್ತ ಶತಮಾನದ ಸವಾಲುಗಳನ್ನು ಎದುರಿಸಲು ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಿ. ಅಗತ್ಯವಿರುವ ಜ್ಞಾನ, ಜೀವನ ಕೌಶಲಗಳನ್ನು ಪೂರೈಸಲು ಶಿಕ್ಷಣ ವ್ಯವಸ್ಥೆಯು ವಿಕಸನಗೊಳ್ಳುತ್ತಿದೆ. ಬೋಧನೆ ಮತ್ತು ಕಲಿಕೆಯ ಪರಿಕಲ್ಪನೆಯು ವ್ಯಾಪಕವಾದ ಬದಲಾವಣೆಗಳಿಗೆ ಒಳಗಾಗಿದೆ. ಇದರನ್ವಯ ಇಲಾಖೆಯು ವಿವಿಧ ಕಾರ್ಯಕ್ರಮಗಳನ್ನು ರೂಪಿಸಿ, ಗುಣಮಟ್ಟದ ಶಿಕ್ಷಣವನ್ನು ನೀಡಲು ನಿರಂತರವಾಗಿ ಕ್ರಮ ವಹಿಸುತ್ತಿದೆ.

ಮಕ್ಕಳ ಸಾಮರ್ಥ್ಯಾಧಾರಿತ ಕಲಿಕೆಗೆ ಅಗತ್ಯವಿರುವ ಕಲಿಕಾಫಲಗಳನ್ನು ಸಾಧಿಸಲು ಮತ್ತು ಕಲಿಕೆಯನ್ನು ದೃಢಗೊಳಿಸಲು ಅನುಕೂಲವಾಗುವಂತೆ ಕನ್ನಡ, ಇಂಗ್ಲಿಷ್ ಮತ್ತು ಗಣಿತ ವಿಷಯಗಳಿಗೆ ವಿದ್ಯಾರ್ಥಿಗಳ ಕಲಿಕಾ ಅಂತರವನ್ನು ಗಮನದಲ್ಲಿಟ್ಟುಕೊಂಡು 'ಅಭ್ಯಾಸ ಪುಸ್ತಕ' ಗಳನ್ನು ರೂಪಿಸಲಾಗಿದೆ.

ಪ್ರತಿ ಪಠ್ಯ ಪುಸ್ತಕಕ್ಕೆ ಅಭ್ಯಾಸ ಪುಸ್ತಕವನ್ನು ಎರಡು ಭಾಗಗಳಲ್ಲಿ ರಚಿಸಲಾಗಿದ್ದು, ಭಾಗ – 1 ಮತ್ತು ಭಾಗ – 2 ಅಭ್ಯಾಸ ಪುಸ್ತಕಗಳನ್ನು ಪ್ರತಿ ವಿದ್ಯಾರ್ಥಿಗೆ ನೀಡಲಾಗಿದೆ. ಘಟಕದ ಅಂತ್ಯದಲ್ಲಿ ಕಿರು ಪರೀಕ್ಷೆಯನ್ನು (Micro test) ನೀಡಿದ್ದು, ಸ್ವಮೌಲ್ಯಮಾಪನ ಮಾಡಲು ವಿದ್ಯಾರ್ಥಿಗಳಿಗೆ ಸ್ವಮೌಲ್ಯಮಾಪನ ಸಾಧನವನ್ನು ನೀಡಿದೆ.

ಈ ಅಭ್ಯಾಸ ಪುಸ್ತಕದಲ್ಲಿ ನೀಡಿರುವ ಚಟುವಟಿಕೆಗಳು ಎಲ್ಲಾ ಹಂತದ ಮಕ್ಕಳು ಅತ್ಯವಶ್ಯಕವಾದ ಸಾಮರ್ಥ್ಯಗಳನ್ನು ಕರಗತ ಮಾಡಿಕೊಳ್ಳಲು ಸಹಾಯಕವಾಗುತ್ತವೆ. ಮಕ್ಕಳು ಸ್ವತಂತ್ರವಾಗಿ ಹಾಗೂ ಕೆಲವು ಕಡೆ ಅಧ್ಯಾಪಕರ, ಸಹಪಾಠಿಗಳ ಅಥವಾ ಪೋಷಕರ ನೆರವಿನಿಂದ ಈ ಚಟುವಟಿಕೆಗಳನ್ನು ತರಗತಿಗಳಲ್ಲಿ, ತರಗತಿಯ ನಂತರ ಅಥವಾ ಮನೆಯಲ್ಲಿ ಮಾಡಬಹುದಾಗಿದೆ. ಎಲ್ಲಾ ವಿಷಯಗಳಿಗೂ ಆಕರ್ಷಕ ಚಿತ್ರ, ಓದು, ಬರಹದ ಮೂಲಕ ಮಕ್ಕಳು ಅದನ್ನು ಅರ್ಥೈಸಿಕೊಳ್ಳುವಂತೆ ಸರಳವಾಗಿ ರೂಪಿಸಲಾಗಿದೆ. ಸಮೀಕ್ಷೆ ಆಧಾರಿತ ಸಾಧನ ಪರೀಕ್ಷೆಗಳಾದ NAS, CSAS ಮತ್ತು PARAKH Rashtriya Sarvekshan 2024ರ ಸಮೀಕ್ಷಾ ವರದಿಗಳನ್ನು ವಿಶ್ಲೇಷಿಸಿದ್ದು, ಇದರಲ್ಲಿ ಮಕ್ಕಳ ಸಾಧನೆಯನ್ನು ಉತ್ತಮಪಡಿಸಲು ಸೂಕ್ತ ಚಟುವಟಿಕೆಗಳನ್ನು ಸೇರ್ಪಡೆ ಮಾಡಿದೆ.

ಇಲ್ಲಿ ನೀಡಿರುವ ಚಟುವಟಿಕೆಗಳೇ ಅಂತಿಮವಲ್ಲ, ಕಲಿಕೆಗೆ ಸಂಬಂಧಿಸಿದಂತೆ ಇತರೇ ಲಭ್ಯ ಚಟುವಟಿಕೆಗಳನ್ನು ಆಧರಿಸಿ ಕಲಿಯಲು ಮುಕ್ತ ಅವಕಾಶ ನೀಡಬೇಕು. ಮಗು ಮಾಡಿದ ಚಟುವಟಿಕೆಗಳನ್ನು ಗಮನಿಸಿ ಶಿಕ್ಷಕರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶ ಕಲ್ಪಿಸಲಾಗಿದೆ. ಈ 'ಅಭ್ಯಾಸ ಪುಸ್ತಕ'ಗಳು ಪಠ್ಯಪುಸ್ತಕಗಳಿಗೆ ಪೂರಕ ಸಂಪನ್ಮೂಲವಾಗಿದ್ದು, ಮಕ್ಕಳಿಗೆ ಹಾಗೂ ಶಿಕ್ಷಕರಿಗೆ ಸಹಾಯಕವಾಗಲಿದೆ. 'ಅಭ್ಯಾಸ ಪುಸ್ತಕ' ಬಳಕೆಗೆ ಪ್ರೇರಕ ಶಕ್ತಿಯಾಗಿರುವ ಶಿಕ್ಷಕ ವೃಂದವು ಉತ್ತಮ ಶಿಕ್ಷಣವನ್ನು ಎಲ್ಲಾ ವಿದ್ಯಾರ್ಥಿಗಳಿಗೆ ತಲುಪಿಸುವ ಗುರುತರ ಜವಾಬ್ದಾರಿಯನ್ನು ಹೊಂದಿರುತ್ತದೆ.

ವಿದ್ಯಾರ್ಥಿಗಳಲ್ಲಿ ಹುದುಗಿರುವ ಜ್ಞಾನ, ಕೌಶಲ್ಯಗಳನ್ನು ಹೊರತರಲು ಈ 'ಅಭ್ಯಾಸ ಪುಸ್ತಕ'ಗಳು ಸದುಪಯೋಗವಾಗಲೆಂದು ಆಶಿಸುತ್ತೇನೆ. ಈ ಪುಸ್ತಕಗಳನ್ನು ಸಿದ್ಧಪಡಿಸಲು ಹಾಗೂ ಪರಿಶೀಲನೆ ಮತ್ತು ಪರಿಷ್ಕರಿಸಲು ಸಹಕರಿಸಿದ ಎಲ್ಲಾ ಸಂಪನ್ಮೂಲ ವ್ಯಕ್ತಿಗಳಿಗೆ ಅಭಿನಂದನೆಗಳನ್ನು ಸಲಿಸುತ್ತಾ ಎಲ್ಲರಿಗೂ ಶುಭಹಾರೈಸುತ್ತೇನೆ.

**ಶ್ರೀ ಗೋಪಾಲಕೃಷ್ಣ H N,**

**ನಿರ್ದೇಶಕರು,**

**DSERT, ಬೆಂಗಳೂರು**

@KTBS NOT TO BE REPUBLISHED

# ಅಭ್ಯಾಸ ಪುಸ್ತಕ 2026–27

## ಪರಿಕಲ್ಪನೆ ಮತ್ತು ಮಾರ್ಗದರ್ಶನ

| | |
|---|---|
| **ಶ್ರೀ ವಿಕಾಸ್ ಕಿಶೋರ್ ಸುರಳ್ಕರ್.,**<br>ಭಾ.ಆ.ಸೇ.,<br>ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ,<br>ನೃಪತುಂಗ ರಸ್ತೆ, ಬೆಂಗಳೂರು. | **ಶ್ರೀ ಗೋಪಾಲಕೃಷ್ಣ H N,**<br>ನಿರ್ದೇಶಕರು,<br>DSERT, ಬೆಂಗಳೂರು |

## ಸಹಕಾರ

| | | |
|---|---|---|
| **ಶ್ರೀಮತಿ ಮಂಗಳ ಜಿ**<br>ಉಪ ನಿರ್ದೇಶಕರು,<br>DSERT, ಬೆಂಗಳೂರು | ಶ್ರೀ ರಂಗನಾಥ ಸ್ವಾಮಿ,<br>**ಪ್ರಾಂಶುಪಾಲರು**<br>DIET, ºÁ¸À | ಶ್ರೀಮತಿ ಸುಜಾತ ಸಿ<br>ಹಿರಿಯ ಉಪನ್ಯಾಸಕರು DIET,<br>ಹಾಸನ |

@KTBS
NOT TO BE REPUBLISHED

## ನಿರ್ವಹಣೆ

**ಶ್ರೀಮತಿ ರಾಧಾ ಪಿ.**
ಹಿರಿಯ ಸಹಾಯಕ ನಿರ್ದೇಶಕರು
ಡಿ.ಎಸ್.ಇ.ಆರ್.ಟಿ, ಬೆಂಗಳೂರು

## ತಾಂತ್ರಿಕ ಸಹಕಾರ

**ಶ್ರೀ ಮೋಹನ್ ಕುಮಾರ್ ಪಿ**
ತಾಂತ್ರಿಕ ಸಹಾಯಕರು
ಡಿ.ಎಸ್.ಇ.ಆರ್.ಟಿ, ಬೆಂಗಳೂರು

## ಪರಿಶೀಲನೆ/ ಪರಿಷ್ಕರಣೆ ತಂಡ

| | |
|---|---|
| **ಕಲಾವತಿ ಜಿ ಪಿ**<br>ಸಹ ಶಿಕ್ಷಕಿ KPS ಹಳೆ ಬೀಡು,<br>ಬೇಲೂರು ತಾಲೂಕು ಹಾಸನ | **ರಮ್ಯಾ ಹೆಚ್ ಕೆ**<br>ಸಹ ಶಿಕ್ಷಕಿ GHPS ಸಾತೇನಹಳ್ಳಿ,<br>ಹಾಸನ ತಾಲ್ಲೂಕು ಹಾಸನ |

# ಪರಿವಿಡಿ


| ಕ್ರ.ಸಂ. | ವಿಷಯ | ಪುಟ ಸಂಖ್ಯೆ |
|---|---|---|
| 1. | ವಚನಗಳು | 1–4 |
| 2. | ವಿರುದ್ಧಾರ್ಥಕ ಪದಗಳು | 5–9 |
| 3. | ಲಿಂಗಗಳು | 10–13 |
| 4. | ಸಮನಾರ್ಥಕ ಪದಗಳು | 14–17 |
| 5. | ಗಾದೆಗಳು | 18–22 |
| 6. | ಕಿರು ಪರೀಕ್ಷೆ–1 | 23 |
| 7. | ದ್ವಿರುಕ್ತಿಗಳು | 24–26 |
| 8. | ಪದಗಳು | 27–32 |
| 9. | ವಾಕ್ಯಗಳು | 33–37 |
| 10. | ಒಗಟುಗಳು | 38–42 |
| 11. | ಕಿರುಪರೀಕ್ಷೆ – 2 | 43–44 |
| 12. | ಬರವಣಿಗೆ | 45–48 |
| 13. | ಕಥೆ ಓದು | 49–57 |
| 14. | ಕಿರು ಪರೀಕ್ಷೆ – 3 | 58–59 |


@KTBS NOT TO BE REPUBLISHED

**ವಿದ್ಯಾರ್ಥಿಗಳು ಗಮನಿಸಬೇಕಾದ ಅಂಶಗಳು :**

* ಈ ಅಭ್ಯಾಸ ಪುಸ್ತಕದ ಪ್ರತಿ ಪುಟವನ್ನು ದಿನಕ್ಕೊಂದರಂತೆ ಅಭ್ಯಾಸ ಮಾಡಬೇಕು.
* ಅಭ್ಯಾಸ ಪುಸ್ತಕದಲ್ಲಿ ಒಂದು ಪುಟ ಪೂರ್ಣಗೊಳಿಸಿದ ನಂತರವೇ ಮುಂದಿನ ಪುಟಕ್ಕೆ ಹೋಗಬೇಕು.
* ಚಟುವಟಿಕೆಗಳು ಅರ್ಥವಾಗದಿದ್ದಲ್ಲಿ ಸ್ನೇಹಿತರ/ಶಿಕ್ಷಕರ ಸಹಾಯ ಪಡೆಯುವುದು.
* ಸ್ವಯಂ ಮೌಲ್ಯಮಾಪನ ಪುಟದಲ್ಲಿ ನಿಮಗಿಷ್ಟವಾದ ಚಟುವಟಿಕೆಗಳಿಗೆ '☺' ಸಂಕೇತವನ್ನು, ಭಾಗಶಃ ಇಷ್ಟವಾಗಿದ್ದಲ್ಲಿ '😐' ಸಂಕೇತವನ್ನು ಅಥವಾ ಇಷ್ಟವಾಗದೇ ಇದ್ದಲ್ಲಿ '☹' ಸಂಕೇತವನ್ನು ಗುರುತಿಸಬೇಕು.

❖ ❖ ❖

# 1. ವಚನಗಳು



**ಅ. ಇದನ್ನು ನೀವು ಹೇಗೆ ಓದು ಓದುವಿರಿ?**

1. ನನ್ನ ಮನೆಯಲ್ಲಿ  ಇದೆ.

ನನ್ನ ಮನೆಯಲ್ಲಿ  ಇವೆ.

2. ದೀಪಾವಳಿಯಂದು  ವನ್ನು ಅಲಂಕರಿಸುತ್ತಾರೆ.

ದೀಪಾವಳಿಯಂದು  ಗಳನ್ನು ಅಲಂಕರಿಸುತ್ತಾರೆ.

3. ರಸ್ತೆಯ ಬದಿಯಲ್ಲಿ  ಇದೆ.

ರಸ್ತೆಯ ಬದಿಯಲ್ಲಿ  ಇವೆ.

4.  ಯಲ್ಲಿ ತರತರಹದ ವಸ್ತುಗಳಿವೆ.

 ಯಲ್ಲಿ ತರತರಹದ ವಸ್ತುಗಳಿವೆ.

© KTBS NOT TO BE REPUBLISHED

ಆ. ನನ್ನನ್ನು ಓದುತ್ತಾ ಬರೆಯಿರಿ.

1. ಅಣ್ಣ - ಅಣ್ಣಂದಿರು

2. ತಮ್ಮ - ತಮ್ಮಂದಿರು

3. ತಂಗಿ - ತಂಗಿಯರು

4. ಅಜ್ಜ - ಅಜ್ಜಂದಿರು

5. ಅಜ್ಜಿ - ಅಜ್ಜಿಯಂದಿರು

6. ಮಾವ - ಮಾವಂದಿರು

7. ಚಿಕ್ಕಪ್ಪ - ಚಿಕ್ಕಪ್ಪಂದಿರು

8. ಚಿಕ್ಕಮ್ಮ - ಚಿಕ್ಕಮ್ಮಂದಿರು

9. ಅತ್ತೆ - ಅತ್ತೆಯಂದಿರು

10. ಮಗು - ಮಕ್ಕಳು

(ಇವುಗಳನ್ನು 'ಏಕವಚನ - ಬಹುವಚನ ಪದ'ಗಳೆಂದು ಕರೆಯುವರು.)

@KTBS NOT TO BE REPUBLISHED

ಇ. ಕೊಟ್ಟಿರುವ ಪದಗಳಿಗೆ ಬಹುವಚನರೂಪ ಬರೆಯಿರಿ.

| | |
|---|---|
| 1. ಶಾಲೆ – | 2. ಮರ – |
| 3. ದಿನ – | 4. ಪುಸ್ತಕ – |
| 5. ಅಣ್ಣ – | 6. ಮಗು – |

ಈ. ಕೊಟ್ಟಿರುವ ಪದಗಳಿಗೆ ಏಕವಚನರೂಪ ಬರೆಯಿರಿ.

| | |
|---|---|
| 1. ಕಿಟಕಿಗಳು – | 2. ಮನೆಗಳು – |
| 3. ಅಕ್ಕಂದಿರು – | 4. ಬೀಗಗಳು – |
| 5. ಪೆನ್ನುಗಳು – | 6. ಬಳೆಗಳು – |
| 7. ಎಮ್ಮೆಗಳು – | 8. ತಮ್ಮಂದಿರು – |
| 9. ಹಕ್ಕಿಗಳು – | 10. ಚಿಕ್ಕಪ್ಪಂದಿರು – |
| 11. ಮಕ್ಕಳು – | 12. ಜನರು – |

@KTBS NOT TO BE REPUBLISHED

**ಉ. ಬಿಟ್ಟ ಸ್ಥಳದಲ್ಲಿ ಸರಿಯಾದ ಪದ ಬರೆಯಿರಿ ಹಾಗೂ ಈ ಪದಗಳನ್ನು ಮಾದರಿಯಂತೆ ಬರೆಯಿರಿ.**

**ಮಾದರಿ:** ಅಣ್ಣ ಆಟವಾಡುತ್ತಿದ್ದಾನೆ.

ಅಣ್ಣಂದಿರು ಆಟವಾಡುತ್ತಿದ್ದಾರೆ.

| ಅಣ್ಣ |
| --- |
| ಅಣ್ಣಂದಿರು |

1. ತಮ್ಮ ಚಿತ್ರ ಬರೆಯುತ್ತಿದ್ದಾನೆ.

.............ಚಿತ್ರ ಬರೆಯುತ್ತಿದ್ದಾನೆ.

2. ಅಕ್ಕ ಹಾಡು ಹಾಡುತ್ತಾಳೆ.

.......... ಹಾಡು ಹಾಡುತ್ತಾರೆ.

3. ....... ಚಿಕ್ಕಮ್ಮ ಊಟ ಬಡಿಸಿದಳು.

4. ಹಕ್ಕಿ ಆಗಸದಲ್ಲಿ ಹಾರುತ್ತಿದೆ.

......... ಆಗಸದಲ್ಲಿ ಹಾರುತ್ತಿವೆ.

5. ಮಗು ಆಟವಾಡುತ್ತಿದೆ.

.........ಆಟವಾಡುತ್ತಿದ್ದಾರೆ.

6. ಹಸು ಅಂಬಾ ಎನ್ನುತ್ತಿದೆ.

................ಅಂಬಾ ಎನ್ನುತ್ತಿವೆ.

@KTBS
NOT TO BE REPUBLISHED

## 2. ವಿರುದ್ಧಾರ್ಥಕ ಪದಗಳು

### ಅ. ಓದುತ್ತಾ ಬರೆಯಿರಿ.

| | | |
|---|---|---|
| 1. | ಶಿಸ್ತು X ಅಶಿಸ್ತು | |
| 2. | ಆರೋಗ್ಯ X ಅನಾರೋಗ್ಯ | |
| 3. | ನೀತಿ X ಅನೀತಿ | |
| 4. | ವೀರ X ಹೇಡಿ | |
| 5. | ಸಂತೋಷ X ಅಸಂತೋಷ | |
| 6. | ಉತ್ಸಾಹ X ನಿರುತ್ಸಾಹ | |
| 7. | ಉನ್ನತಿ X ಅವನತಿ | |
| 8. | ಹಗಲು X ಇರುಳು | |
| 9. | ಆಗಮನ X ನಿರ್ಗಮನ | |
| 10. | ಪೂರ್ಣ X ಅಪೂರ್ಣ | |

@KTBS
NOT TO BE REPUBLISHED

| | | |
|---|---|---|
| 11. | ನ್ಯಾಯ X ಅನ್ಯಾಯ | |
| 12. | ದೂರ X ಹತ್ತಿರ | |
| 13. | ಆರಂಭ X ಮುಕ್ತಾಯ | |
| 14. | ಒಳಾಂಗಣ X ಹೊರಾಂಗಣ | |
| 15. | ಜಯXಅಪಜಯ | |

(ಇವುಗಳನ್ನು 'ವಿರುದ್ಧಾರ್ಥಕ ಪದ'ಗಳೆಂದು ಕರೆಯುವರು)

ಆ. ಕೊಟ್ಟಿರುವ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.

| | |
|---|---|
| 1. ಜಯ X | 2. ಆರೋಗ್ಯ X |
| 3. ಒಳಾಂಗಣ X | 4. ಪವಿತ್ರ X |
| 5. ಆರಂಭ X | 6. ಸಾಧ್ಯ X |
| 7. ಸುರು X | 8. ಧೈರ್ಯ X |
| 9. ಸ್ವಾತಂತ್ರ್ಯ X | 10. ಮೃತ X |

©KTBS NOT TO BE REPUBLISHED

## ಆ. ನಮ್ಮಿಬ್ಬರಲ್ಲಿರುವ ವಿರುದ್ಧಾರ್ಥಕ ಪದಗಳನ್ನು ಆರಿಸಿ ಬರೆಯಬಲ್ಲಿರಾ?







@KTBS NOT TO BE REPUBLISHED

**ಮಾದರಿ:**

| ನಿಯಮಿತ X ಅನಿಯಮಿ |
|---|

1. 
2. 
3. 
4. 
5. 
6. 
7. 
8. 

| | |
|---|---|
| 9. | 10. |
| 11. | 12. |

## ಈ. ಮಾದರಿಯಂತೆ ಆರಿಸಿ ಬರೆಯಿರಿ.

**ಗೌರವ, ಅವಿನಯ, ಜಯ, ಅನೀತಿ, ಹೊರಗೆ, ಅಹಿಂಸೆ,**

**ಮಾದರಿ :**

| | |
|---|---|
| ನೀತಿ X ಅನೀತಿ | ವಿನಯ, X |
| ಅಪಜಯ X | ಒಳಗೆ X |
| ಹಿಂಸೆ X | ಅಗೌರವ X |
| ಅಸಾಧ್ಯ X | ಬೇಕು X |

## ಉ. ಮಾದರಿಯಂತೆ ಬರೆಯಿರಿ.

**ಮಾದರಿ :** ಹಗುರ X ಭಾರ




@KTBS NOT TO BE REPUBLISHED

**ಊ.ಅಡಿಗೆರೆ ಎಳೆದ ಪದಕ್ಕೆ ವಿರುದ್ಧಾರ್ಥಕ ಪದ ಬರೆ.**

**ಮಾದರಿ :** ಸೂರ್ಯ ಉದಯಿಸಿದಾಗ **ಬೆಳಕು** ಮೂಡುತ್ತದೆ.

ಸೂರ್ಯ ಮುಳುಗಿದಾಗ **ಕತ್ತಲು** ಆಗುತ್ತದೆ.

1. ಕ್ರಿಕೆಟ್ ಆಟದಲ್ಲಿ ನಮ್ಮ ದೇಶ **ಗೆದ್ದಾಗ** ಸಂತೋಷವಾಯಿತು.
   ಕ್ರಿಕೆಟ್ ಆಟದಲ್ಲಿ ನಮ್ಮ ದೇಶ ..................... ದುಃಖವಾಯಿತು.
2. ಮನೆಯ **ಒಳಗೆ** ಕೊಠಡಿಗಳಿವೆ.
   ಮನೆಯ..................... ಕಾರುಗಳು ನಿಂತಿವೆ.
3. ಮರದ **ಮೇಲೆ** ಪಕ್ಷಿ ಕುಳಿತಿದೆ.
   ಮರದ ..................... ಹಸು ನಿಂತಿದೆ.
4. ದೋನಿ ಮೊದಲ ಕ್ರಿಕೆಟ್ ಪಂದ್ಯದಲ್ಲಿ **ಹೆಚ್ಚು** ಓಟ ಗಳಿಸಿದರು.
   ದೋನಿ ಎರಡನೇ ಕ್ರಿಕೆಟ್ ಪಂದ್ಯದಲ್ಲಿ ..................... ಓಟ ಗಳಿಸಿದರು.
5. ನಾನು ಎಸೆದ ಕಲ್ಲು **ದೂರ** ಬಿದ್ದಿತು.
   ನಮ್ಮ ಮನೆ ಶಾಲೆಯ ...................



6. ಇಲಿ **ಚಿಕ್ಕ** ಪ್ರಾಣಿ.
   ಆನೆ ..................... ಪ್ರಾಣಿ.
7. ಕಾಗೆಯ ಬಣ್ಣ **ಕಪ್ಪು**.
   ಹಾಲಿನ ಬಣ್ಣ .....................

NOT TO BE REPUBLISHED © KTBS

## 3. ಲಿಂಗಗಳು

ಅ. ಚಿತ್ರ ನೋಡಿ ವಾಕ್ಯ ಸರಿಯಾಗಿದೆಯಾ ? ಗಮನಿಸಿ ಸರಿಯಾಗಿ
[illegible]

1. 

ಪಾಠ ಓದುತ್ತಿದ್ದಾನೆ.

2. 

ಹೂ ಕಟ್ಟುತ್ತಿದ್ದಾಳೆ.

3. 

ಕುದುರೆ ಏರುತ್ತಿದ್ದಾನೆ.

4. 

ಪೇಟೆಗೆ ಹೋಗುತ್ತಿದ್ದಾಳೆ.

@KTBS NOT TO BE REPUBLISHED

ಆ. ಓದುತ್ತಾ ಬರೆ.

| | |
|---|---|
| 1. ಅಪ್ಪ - ಅಮ್ಮ | 8. ಗೆಳೆಯ - ಗೆಳತಿ |
| 2. ಮಾವ - ಅತ್ತೆ | 9. ತುಂಟ - ತುಂಟಿ |
| 3. ಚಿಕ್ಕಪ್ಪ - ಚಿಕ್ಕಮ್ಮ | 10. ಅವನು - ಅವಳು |
| 4. ಅಜ್ಜ - ಅಜ್ಜಿ | 11. ಬಾಲಕ - ಬಾಲಕಿ |
| 5. ತಮ್ಮ - ತಂಗಿ | 12. ವಿದ್ಯಾರ್ಥಿ-ವಿಧ್ಯಾರ್ಥಿನಿ |
| 6. ದೊಡ್ಡಪ್ಪ - ದೊಡ್ಡಮ್ಮ | 13. ಗಂಡು-ಹೆಣ್ಣು |
| 7. ರಾಜ - ರಾಣಿ | 14. ಸೇವಕ ಸೇವಕಿ |

(ಇವುಗಳನ್ನು 'ಪುಲ್ಲಿಂಗ ಸ್ತ್ರೀಲಿಂಗ ಪದ' ಗಳೆಂದು ಕರೆಯುವರು.

@KTBS NOT TO BE REPUBLISHED

ಇ. ಗಮನಿಸುತ್ತಾ ಬರೆಯಿರಿ.

1. ಅಣ್ಣ ದೇವಸ್ಥಾನಕ್ಕೆ ಹೋದನು.
ಅಕ್ಕ ದೇವಸ್ಥಾನಕ್ಕೆ ಹೋದನು.

______________________________

______________________________

2. ಚಿರಂತನ್ ಪ್ರತಿಭಾಕಾರಂಜಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದನು.
ಶ್ವೇತಾ ಪ್ರತಿಭಾಕಾರಂಜಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಳು.

______________________________

______________________________

3. ತಮ್ಮನು ಪಾಠವನ್ನು ಬರೆದನು.
ತಂಗಿಯು ಪಾಠವನ್ನು ಬರೆದಳು.

______________________________

______________________________

4. ಬಾಲಕ ಆಟ ಆಡಿದನು.
ಬಾಲಕಿ ಆಟ ಆಡಿದಳು.

______________________________

______________________________

ಅಡಿಗೆರೆ ಎಳೆದ ಪದಗಳನ್ನು ಬರೆದು ಇವುಗಳು ಏನೆಂಬುದನ್ನು ಚರ್ಚಿಸಿ.

1. ____________ 2. ____________

3. ____________ 4. ____________

@KTBS NOT TO BE REPUBLISHED

**ಈ. ಕೊಟ್ಟಿರುವ ಪದಗಳಿಗೆ ಸ್ತ್ರೀಲಿಂಗ ರೂಪ ಬರೆಯಿರಿ.**

| | |
|---|---|
| 1. ಅಧ್ಯಕ್ಷ – | 2. ದೊಡ್ಡಪ್ಪ – |
| 3. ಬಾಲಕ – | 4. ಅರಸ – |
| 5. ಅಜ್ಜ – | 6. ಶಿಕ್ಷಕ – |

**ಉ. ಈ ವಾಕ್ಯಗಳನ್ನು ಅನ್ಯಲಿಂಗ ವಾಕ್ಯಗಳಾಗಿ ಬದಲಾಯಿಸಿ.**

1. ಹುಡುಗ ಆಟವಾಡಿದನು.

2. ಗೆಳತಿ ಪ್ರವಾಸಕ್ಕೆ ಹೋದಳು.

3. ಅಜ್ಜಿ ಕತೆ ಹೇಳಿದಳು.

4. ಅಮ್ಮ ಮನೆಗೆ ಬರುವಳು.

@KTBS
NOT TO BE REPUBLISHED

**ಊ. ನಿಮ್ಮ ಮನೆಯಲ್ಲಿರುವ ವ್ಯಕ್ತಿಗಳ ಹೆಸರುಗಳನ್ನು ಸ್ತ್ರೀಲಿಂಗ, ಪುಲ್ಲಿಂಗ ಎಂದು ವಿಂಗಡಿಸಿ ಬರೆಯಿರಿ.**

**ಸ್ತ್ರೀಲಿಂಗ :**

**ಪುಲ್ಲಿಂಗ :**

## 4. ಸಮಾನಾರ್ಥಕ ಪದಗಳು

ಅ. ನಾನು ಮತ್ತು ನನ್ನವರು. ಈ ಪದಗಳನ್ನು ಓದುತ್ತಾ ಬರೆ.

1. ಸಾಗರ → ಸಮುದ್ರ → ಕಡಲು → ಶರಧಿ

2. ಪುತ್ರ → ಕುಮಾರ → ತನಯ → ಮಗ

3. ಧ್ವಜ → ಬಾವುಟ → ಪತಾಕೆ

4. ರಾಜ → ದೊರೆ → ಅರಸ → ನೃಪ

5. ಯುದ್ಧ → ಕದನ → ಸಂಗ್ರಾಮ → ಸಮರ

6. ಸೂರ್ಯ → ಭಾಸ್ಕರ → ನೇಸರ → ರವಿ → ಇನ

7. ಭೂಮಿ → ಧರೆ → ಇಳೆ → ಪೃಥ್ವಿ

8. ಕಮಲ → ತಾವರೆ → ಜಲಜ → ನೀರಜ → ಪಂಕಜ

@KTBS NOT TO BE REPUBLISHED

9. ಕಣ್ಣು → ನಯನ → ನೇತ್ರ → ಅಕ್ಷಿ

10. ಅರಿ → ಶತ್ರು → ವೈರಿ → ಹಗೆ

11. ಉದಕ → ನೀರು → ಜಲ → ಸಲಿಲ

12. ಹಾವು → ಉರಗ → ಸರ್ಪ →ಫಣಿ →ಪನ್ನಗ

13. ಉನ್ನತಿ → ಹಿರಿಮೆ → ಏಳಿಗೆ

14. ಆನೆ → ಗಜ → ಕರಿ →ಹಸ್ತಿ

15. ಹೂವು → ಕುಸುಮ → ಪುಷ್ಪ → ಸುಮ

**(ಇವುಗಳನ್ನು 'ಸಮಾನಾರ್ಥಕ' ಪದಗಳೆಂದು ಕರೆಯುವರು.)**

@KTBS NOT TO BE REPUBLISHED

ಆ. ನಿಮಗೆ ತಿಳಿದಿರುವ ಹತ್ತು ಸಮಾನಾರ್ಥಕ ಪದಗಳನ್ನು ಬರೆ.

1. ______ 2. ______

3. ______ 4. ______

5. ______ 6. ______

7. ______ 8. ______

9. ______ 10. ______

ಇ. ಗುಂಪಿನಲ್ಲಿರುವ ನಮ್ಮನ್ನು ಒಂದೆಡೆ ಸೇರಿಸು.

ಖುಷಿ, ಇಚ್ಛೆ, ಹಿಗ್ಗು, ಸಾಮರ್ಥ್ಯ, ಬಲ, ಸಂತೋಷ, ಯೋಗ್ಯತೆ, ಆಪೇಕ್ಷೆ,
ಆಸೆ, ಪೋಷಿಸು, ಸಾಕು, ಆಗಸ, ಗಗನ, ಕಾಪಾಡು, ರಕ್ಷಿಸು, ಭಾನು, ಆಕಾಶ

1

2.

3.

4.

5.

@KTBS NOT TO BE REPUBLISHED

## ಈ. ನನ್ನ ಬಳಗದೊಂದಿಗೆ ಸೇರಿಸು.

**ಮಾದರಿ :**

| | | | |
|---|---|---|---|
| ಉಬ್ಬಸ | | ಬೆರಗು | ಆಶ್ಚರ್ಯ |
| ಆನಂದ | ಆಶ್ಚರ್ಯ | ಅಚ್ಚರಿ | ಬೆರಗು |
| ವಿಸ್ಮಯ | | ಸಂತೋಷ | ಅಚ್ಚರಿ<br>ವಿಸ್ಮಯ |

1.

| | | | |
|---|---|---|---|
| ಕಡಲು | | ಸಾಗರ | |
| ಒಡಲು | ಸಮುದ್ರ | ನಾಗರ | |
| ಶರಧಿ | | ಜಲಧಿ | |

2.

| | | | |
|---|---|---|---|
| ಇನ | | ಅವನಿ | |
| ಪೃಥ್ವಿ | ಭೂಮಿ | ರವಿ | |
| ಧರೆ | | ಇಳೆ | |

3.

| | | | |
|---|---|---|---|
| ಅಡವಿ | | ಪೀಡಿಸು | |
| ಕಡಿ | ಕಾಡು | ವನ | |
| ಕಾನನ | | ಅರಣ್ಯ | |

@KTBS
NOT TO BE REPUBLISHED

# 5. ಗಾದೆಗಳು

ಅ. ನಾ ಯಾರೆಂದು ನಿಮಗೆ ತಿಳಿದಿದೆಯೇ? ಓದುತ್ತಾ ಬರೆ.

1. ತಾಳಿದವನು ಬಾಳಿಯಾನು.

2. ಮಾತೇ ಮುತ್ತು, ಮಾತೇ ಮೃತ್ಯು.

3. ಮಾತು ಬೆಳ್ಳಿ, ಮೌನ ಬಂಗಾರ.

4. ಮನೆಗೆ ಮಾರಿ, ಪರರಿಗೆ ಉಪಕಾರಿ.

5. ಆಳಾಗಿ ದುಡಿ, ಅರಸನಾಗಿ ಉಣ್ಣು.

6. ಶಕ್ತಿಗಿಂತ ಯುಕ್ತಿ ಮೇಲು.

7. ಕೈ ಕೆಸರಾದರೆ ಬಾಯಿ ಮೊಸರು.

8. ಅತಿ ಆಸೆ ಗತಿ ಕೇಡು

©KTBS
NOT TO BE REPUBLISHED

9. ವಿದ್ಯೆಗೆ ವಿನಯವೇ ಭೂಷಣ.

10. ಉಪ್ಪು ತಿಂದವರು ನೀರು ಕುಡಿಯಲೇಬೇಕು.

**(ಇವುಗಳನ್ನು 'ಗಾದೆ'ಗಳೆಂದು ಕರೆಯುತ್ತಾರೆ.)**

ಆ. ನಿಮಗೆ ತಿಳಿದಿರುವ ಇತರೆ ಗಾದೆಗಳನ್ನು ಬರೆಯಿರಿ.

1.

2.

3.

4.

5.

6.

7.

8.

9.

10.

@KTBS NOT TO BE REPUBLISHED

ಇ. ಸುಳಿವು ಬಳಸಿ ನನ್ನನ್ನು ತುಂಬು.




| | |
|---|---|
| ಮಾತು ಬೆಳ್ಳಿ | ಮಾಡಿದ್ದುಣ್ಣೋ |
| ತಾಳಿದವನು | ಎತ್ತು ಏರಿಗೆ ಎಳೆದರೆ |
| ಕೈ ಕೆಸರಾದರೆ | ಹೊಟ್ಟೆಗೆ ಹಿಟ್ಟಿಲ್ಲ |
| ಶಕ್ತಿಗಿಂತ | ಅತಿ ಆಸೆ |
| ವಿದ್ಯೆಗೆ | ಆಳಾಗಿ ದುಡಿ |



@KTBS NOT TO BE REPUBLISHED

ಈ. ಸಂಖ್ಯೆ ನಮ್ಮದು. ಪದ ನಿಮ್ಮದು. ನಮ್ಮಿಬ್ಬರನ್ನು ಒಟ್ಟುಗೂಡಿಸಿ ಬರೆಯಿರಿ.






@KTBS NOT TO BE REPUBLISHED

ಮಾದರಿ : 3, 9 = ದೇಶ ತಿರುಗು, ಕೋಶ ಓದು.

1. 4,1,11 = ________________

2. 2,10,6 = ________________

3. 8,14 = ________________

4. 5,22,13,7= ________________

5. 15,16,12,21= ________________

6. 17,18,19,20= ________________

@KTBS
NOT TO BE REPUBLISHED

## ವಿದ್ಯಾರ್ಥಿಗಳ ಸ್ವಯಂ ಮೌಲ್ಯಮಾಪನ

| ಕ್ರ.ಸಂ. | ಕಲಿಕಾ ಸೂಚಕಗಳು | ☺ | 😐 | ☹ |
|---|---|---|---|---|
| 1. | ಗಾದೆಗಳ ಅರ್ಥವನ್ನು ಬರೆಯುವೆ. | | | |
| 2. | ಪದಗಳ ಅನ್ಯಲಿಂಗಗಳನ್ನು ಗುರುತಿಸುವೆ. | | | |
| 3. | ಪದಗಳಿಗಿರುವ ಸಮಾನ ಅರ್ಥಗಳನ್ನು ಹೇಳುವೆ. | | | |
| 4. | ಪದಗಳ ವಿರುದ್ಧ ಅರ್ಥವನ್ನು ಬರೆಯುವೆ. | | | |

| ಶಿಕ್ಷಕರ ಅಭಿಪ್ರಾಯ: ಅತ್ಯುತ್ತಮ | | ಉತ್ತಮ | | ಸಾಧಾರಣ | |
|---|---|---|---|---|---|

## 6. ಕಿರು ಪರೀಕ್ಷೆ – 1

1. ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.

| | |
|---|---|
| ಜ್ಞಾನ X | ದುರ್ಗುಣ X |
| ಶಿಷ್ಟ X | ಆಚಾರ X |
| ಸುಗಂಧ X | ಆದಿ X |

2. ಕೆಳಗಿನ ಪದಗಳಿಗೆ ವಚನಗಳನ್ನು ಬದಲಿಸಿ ಬರೆಯಿರಿ.

| | |
|---|---|
| ಮಕ್ಕಳು - | ಜನರು - |
| ಜಾತ್ರೆ - | ಆಚಾರ – |
| ತಾತ - | ಊರು - |

NOT TO BE REPUBLISHED @KTBS

3. ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನು ಬರೆಯಿರಿ.

| | |
|---|---|
| ಅರಸ - | ಪತಿ - |
| ಮಗ - | ಕರಿ – |

4. ಕೆಳಗಿನವುಗಳಿಗೆ ಅನ್ಯ ಲಿಂಗಗಳನ್ನು ಬರೆಯಿರಿ.

| | | |
|---|---|---|
| ಅಕ್ಕ - | ತಂದೆ - | ತಾತ - |

5. ನಿಮಗೆ ತಿಳಿದಿರುವ ಎರಡು ಗಾದೆಗಳನ್ನು ಬರೆಯಿರಿ

ಅ.

ಆ.

| ಶಿಕ್ಷಕರ ಅಭಿಪ್ರಾಯ: ಅತ್ಯುತ್ತಮ | | ಉತ್ತಮ | | ಸಾಧಾರಣ | |
|---|---|---|---|---|---|



# 7. ದ್ವಿರುಕ್ತಿಗಳು

ಅ. ನನ್ನನ್ನು ಬೇಗಬೇಗ ಓದುತ್ತಾ ಬರೆಯಿರಿ.

| | | |
|---|---|---|
| ಗರ–ಗರ | ದರ–ದರ | ಢವ–ಢವ |
| ಪದೇ–ಪದೇ | ಸಣ್ಣ–ಸಣ್ಣ | ಪಟ್ಟ–ಪಟ್ಟ |
| ಓಡಿ–ಓಡಿ | ಹೌದು–ಹೌದು | ಧಗ–ಧಗ |
| ನಡೆ–ನಡೆ | ರಪ–ರಪ | ಬೇಗ–ಬೇಗ |
| ಫಳ–ಫಳ | ತರ–ತರ | ಜುಳು–ಜುಳು |
| ಥರ–ಥರ | ಝಣ–ಝಣ | ವಿಧ–ವಿಧ |
| ಘಮ–ಘಮ | ಸರ–ಸರ | ಪಿಳಿ–ಪಿಳಿ |
| ಮೇಲೆ–ಮೇಲೆ | ಚರ–ಚರ | ಮೇಲೆ–ಮೇಲೆ |

(ಇವುಗಳನ್ನು 'ದ್ವಿರುಕ್ತಿಗಳು' ಎನ್ನುತ್ತಾರೆ)

@KTBS
NOT TO BE REPUBLISHED

ಆ. ನಿಮಗೆ ತಿಳಿದಿರುವ ಇದೇ ರೀತಿಯ ಪದಗಳನ್ನು ಬರೆಯಿರಿ.

| | | |
|---|---|---|
| | | |
| | | |
| | | |
| | | |
| | | |
| | | |
| | | |
| | | |
| | | |

@KTBS
NOT TO BE REPUBLISHED

ಇ. ನನ್ನನ್ನು ಬೇಗಬೇಗ ತುಂಬಿರಿ

**(ಧಗ-ಧಗ, ಝಣ-ಝಣ, ಸರ-ಸರ, ತರ-ತರ, ವಿಧ-ವಿಧ, ಪಟ-ಪಟ, ಥರ-ಥರ, ಜುಳು-ಜುಳು, ದಬ-ದಬ, ಫಳ-ಫಳ)**

1. ಮಕ್ಕಳು ............................ ದ ಉಡುಪುಗಳನ್ನು ತೊಟ್ಟಿದ್ದರು.

2. ಆಗಸದಲ್ಲಿ ಗಾಳಿಪಟವು ............................ನೆ ಹಾರಿತು.

3. ನಾಣ್ಯಗಳು ............................ ಎಂದು ಸದ್ದು ಮಾಡುತ್ತದೆ.

4. ಆಭರಣವು ............................ನೆ ಹೊಳೆಯುತ್ತದೆ.

5. ಭಯಗೊಂಡ ಬಾಲಕನು ............................ನೆ ನಡುಗಿದ.

6. ನೀರು ಹರಿಯುವಾಗ ........................... ಎಂದು ಸದ್ದು ಮಾಡುತ್ತದೆ.

7. ಬಾಗಿಲನ್ನು ........................... ಎಂದು ಬಡಿದನು.

8. ಬೆಂಕಿ ............................ನೆ ಉರಿಯುತ್ತದೆ.

9. ಹಾವು ............................ನೆ ಹರಿಯುತ್ತದೆ.

10. ಮನೆಯಲ್ಲಿ ...................... ವಾದ ವಸ್ತುಗಳು.



@KTBS NOT TO BE REPUBLISHED

# 8. ಪದಗಳು

## ಅ. ಚಿತ್ರ ನೋಡಿದಾಗ ನನ್ನ ಹೆಸರು ನೆನಪಾಗುವುದೇ?

| | | | |
|---|---|---|---|
|  | ಕ್ಕಳುಮ |  | ಭುಜತ್ರಿ |
|  | ಮೆಲುಟ್ಟಿ |  | ರಿಬ್ಬಕೊ |
|  | ಸ್ಥಾನದೇವ |  | ಗುಲಿದ್ದ |
|  | ಲಿಪ್ಪಚ |  | ಗೋಲ್ಲಾರಿ |
|  | ತಪರ್ವ |  | ನಕ್ಷಯಗಾ |

@KTBS NOT TO BE REPUBLISHED

## ಆ. ಈ ಪದಗಳನ್ನು ಸರಿಯಾಗಿ ಬರೆಯಿರಿ.

**ಮಾದರಿ :** ಡಗರು = ಗರುಡ

| | | | |
|---|---|---|---|
| ಹೋರಾಟ = | | ಕುಮುಧು = | |
| ನಕಸು = | | ದರಿಪಾಚಾ = | |
| ತ್ತೂತುರಿ = | | ಗೆತೆರಿ = | |
| ಚವಳಿಳು = | | ಟುಗುಕು = | |
| ಸಅರವ = | | ತಿಷ್ಟ್ರಪರಾ = | |
| ಡುಗೆಲು = | | ಳಿಟಪಗಾ = | |

## ಇ. ಈ ಪದಗಳಿಗೆ 'ಗ್ರಾಂಥಿಕ ರೂಪವನ್ನು ಬರೆಯಿರಿ.

| | | | |
|---|---|---|---|
| ವದಗ್ಯಾವು – | | ಸಿಟ್ಯಾಕೆ – | |
| ಬೆಳೆಯಾಲಿ – | | ಅಂದುಳ್ಳ – | |
| ಸೊಸಿ – | | ಮ್ಯಾಲೆ – | |
| ತಕ್ಕೊಂಡು – | | ಮಕ – | |
| ಆದ್ರ – | | ಮನಿ – | |
| ಹೆಚ್ಚ್ಯಾವು – | | ಐತಿ – | |
| ಹೋಗ್ತಾನೆ – | | ಇವ – | |
| ಹೇಳಬ್ಯಾಡ್ರಿ – | | ಕೂಡ್ರಿ – | |
| ಕುಂತಾನ – | | ಯಾರ್ಗೂ – | |

©KTBS NOT TO BE REPUBLISHED

ಈ. ಈ ಪದಗಳ ಪರಿಚಯ ನಿನಗಿದೆಯೇ ? ಹೇಳುತ್ತಾ ಬರೆ.

| | |
|---|---|
| ತಕ್ಕೊಂಡು - ತೆಗೆದುಕೊಂಡು | ಹೆಡಿ - ಹೆಡೆ |
| ಯಾತಕ - ಏತಕೆ | ಮನಿಗೆ - ಮನೆಗೆ |
| ಹತ್ರ - ಹತ್ತಿರ, | ಯಾರ್ಗೂ - ಯಾರಿಗೂ |
| ಬರ್‍ತಾನೆ - ಬರುತ್ತಾನೆ | ಹೆಚ್ಚಾವು - ಹೆಚ್ಚಾದವು |
| ಸೊಸಿ - ಸೊಸೆ | ಯಿಲ್ಲ - ಇಲ್ಲ |
| ಸಿಟ್ಟ್ಯಾಕೆ - ಸಿಟ್ಟುಯಾಕೆ | ಹೆಚ್ಚ್ಯಾವು - ಹೆಚ್ಚಾದವು |
| ಬೆಳೆಯಾಲಿ - ಬೆಳೆಯಲಿ | ಮುಗಿದಾವು - ಮುಗಿದವು |
| ತಿಂತಾನ - ತಿನ್ನುತ್ತಾನೆ | ಹೊಗ್ಯಾನ್ರಿ - ಹೋಗಿದ್ದಾನೆ |

ಇವುಗಳನ್ನು 'ಆಡುಭಾಷೆ' ಮತ್ತು 'ಗ್ರಾಂಥಿಕ ರೂಪ'ದ ಪದಗಳೆನ್ನುವರು.

@KTBS NOT TO BE REPUBLISHED

## ನಾನೆಷ್ಟು ಕಲಿತಿರುವೆ ? – 3

ಉ. ಮಾದರಿಯಂತೆ ಪದ ಬರೆ.




ಮಾದರಿ :

| | | | |
|---|---|---|---|
| ಕನ್ನಡ | | | |
| | | | |
| | | | |
| | | | |

@KTBS NOT TO BE REPUBLISHED




ಮಾದರಿ :

| | | | |
|---|---|---|---|
| ಜನ | | | |
| | | | |
| | | | |
| | | | |

@KTBS
NOT TO BE REPUBLISHED



ಊ.ಸೂಕ್ತ ಸ್ಥಳದಲ್ಲಿ ಸ,ಶ,ಷ ಗಳನ್ನು ಬಳಸಿ ಸರಿಯಾದ ಪದ ರಚಿಸು.



ಮಾದರಿ :

| | | | |
|---|---|---|---|
| ನಿಮಿಷ | ದೇಶ | ವಾಸ | |
| | | | |
| | | | |
| | | | |



@KTBS NOT TO BE REPUBLISHED

# 9. ವಾಕ್ಯಗಳು

**ಅ. ವಾಕ್ಯಗಳನ್ನು ಗಮನಿಸಿ ಓದುತ್ತಾ ಬರೆಯಿರಿ.**

1. ಮಕ್ಕಳು ಶಾಲೆಗೆ ಹೋಗುವರು.

   ______________________________

2. ಸುಮಿತ್ರ ಎಲ್ಲಿಗೆ ಹೋದಳು ?

   ______________________________

3. ವಿಷ್ಣು ಜೋಗ ಜಲಪಾತವನ್ನು ನೋಡಿ ಅಬ್ಬಾ ! ಎಂದು ಉದ್ಗರಿಸಿದನು.

   ______________________________

4. ರಮ್ಯಾ, ಸೀಮಾ, ಪವಿತ್ರ ಮತ್ತು ಲೇಖನ ನಾಟಕ ನೋಡಲು ಹೋದರು.

   ______________________________

5. ಬಸವಣ್ಣನವರು ''ಕಾಯಕವೇ ಕೈಲಾಸ'' ಎಂದು ಹೇಳುತ್ತಿದ್ದರು.

   ______________________________

6. ಅಬ್ದುಲ್ ಕಲಾಂರವರು ನಮ್ಮ ದೇಶದ ರಾಷ್ಟ್ರಪತಿಯಾಗಿದ್ದರು.

   ______________________________

7. ಹಕ್ಕಿ ತನ್ನ ಮರಿಗೆ ಗುಟುಕು ನೀಡುತ್ತದೆ.

   ______________________________

8. ಅಯ್ಯೋ ! ಅಮ್ಮ ಕಾಲು ನೋಯುತ್ತಿದೆ.

   ______________________________



@KTBS NOT TO BE REPUBLISHED

ಇ. ಮಾದರಿಯಂತೆ ಅರ್ಥಪೂರ್ಣ ವಾಕ್ಯಗಳನ್ನು ರಚಿಸಿ.

| | | |
|---|---|---|
| ಉಷಾ | ಹೊಲ | ತಿಂದನು |
| ಶ್ರೀನಿಧಿ | ಹಾಡು | ಉತ್ತನು |
| ಹುಡುಗರು | ಆಟ | ತಿಂದಿತು |
| ಹುಡುಗಿಯರು | ಹುಲ್ಲು | ತಿಂದಳು |
| ಚಿಕ್ಕಪ್ಪ | ಕಬ್ಬು | ಆಡಿದರು |
| ಎಮ್ಮೆ | ಹಣ್ಣು | ಹಾಡಿದರು |

**ಮಾದರಿ** : ಉಷಾ ಕಬ್ಬು ತಿಂದಳು.

@KTBS NOT TO BE REPUBLISHED

1. ______________________
2. ______________________
3. ______________________
4. ______________________
5. ______________________
6. ______________________
7. ______________________
8. ______________________

### ಈ. ಮಾದರಿಯಂತೆ ಅರ್ಥಪೂರ್ಣ ವಾಕ್ಯಗಳನ್ನು ರಚಿಸು.

| | | |
|---|---|---|
| ನಾನು | | ಹೋಗುತ್ತವೆ |
| ನೀನು | | ಹೋಗುತ್ತೇನೆ |
| ಅವನು | | ಹೋಗುವೆಯಾ? |
| ಅವಳು | | ಹೋಗುತ್ತಾನೆ |
| ಕವಿತಾ | ಮನೆಗೆ | ಹೋದರು |
| ಗುರುಗಳು | | ಹೋಗಲಿಲ್ಲ |
| ಸುರೇಶ | | ಹೋಗಬೇಕು |
| ಹಸುಗಳು | | ಹೋಗುತ್ತಾಳೆ |

**ಮಾದರಿ** : ನಾನು ಮನೆಗೆ ಹೋಗುತ್ತೇನೆ.

1. ______________________
2. ______________________
3. ______________________
4. ______________________
5. ______________________
6. ______________________
7. ______________________

______________________

@KTBS NOT TO BE REPUBLISHED

## ಉ. ಮಾದರಿಯಂತೆ ಅರ್ಥಪೂರ್ಣ ವಾಕ್ಯಗಳನ್ನು ರಚಿಸು.

| | | |
|---|---|---|
| ರೈತರು | ಪುಸ್ತಕವನ್ನು | ಆಳಿದರು |
| ಮಕ್ಕಳು | ರಾಜ್ಯವನ್ನು | ಕೆತ್ತಿದರು |
| ಗುರುಗಳು | ಹೊಲವನ್ನು | ಹಾಡಿದರು |
| ಶಿಲ್ಪಿಗಳು | ಹಾಡನ್ನು | ಓದಿದರು |
| ರಾಜರು | ವಿಗ್ರಹಗಳನ್ನು | ಉತ್ತರು |

**ಮಾದರಿ** : ಶಿಲ್ಪಿಗಳು ವಿಗ್ರಹಗಳನ್ನು ಕೆತ್ತಿದರು.

1. ______________________
2. ______________________
3. ______________________
4. ______________________
5. ______________________
6. ______________________
7. ______________________
8. ______________________
9. ______________________
10.

@KTBS
NOT TO BE REPUBLISHED

ಊ. ವಾಕ್ಯಗಳನ್ನು ಸರಿಪಡಿಸಿ ಬರೆ.

**ಮಾದರಿ** : ಕಣ್ಣಾಮುಚ್ಚಾಲೆ ನನಗೆ ಎಂದರೆ ಆಟ ಇಷ್ಟ

ನನಗೆ ಕಣ್ಣಾಮುಚ್ಚಾಲೆ ಆಟ ಎಂದರೆ ಇಷ್ಟ

1. ತಮ್ಮ ಮಗಳಿಗೆ ಹುಡುಕುತ್ತಿದ್ದವು ದಂಪತಿಗಳು ಇಲಿ ವರನನ್ನು

______________________________

______________________________

2. ಹೋದರು ಕರೆದುಕೊಂಡು ಮಕ್ಕಳನ್ನು ಪ್ರವಾಸಕ್ಕೆ ಶಿಕ್ಷಕರು

______________________________

______________________________

3. ವೀರಾವೇಷದಿಂದ ಅಭಿಮನ್ಯು ಯುದ್ಧದಲ್ಲಿ ಹೋರಾಡಿದನು.

______________________________

______________________________

4. ಸಭೆಗೆ ಎಲ್ಲಾ ಪ್ರಾಣಿಗಳು ಆಸೀನರಾಗಿದ್ದವು ಬಂದು

______________________________

______________________________

5. ಪಾಳೇಗಾರನು ಚಿತ್ರದುರ್ಗವನ್ನು ಆಳುತ್ತಿದ್ದನು ಮದಕರಿನಾಯಕನೆಂಬ

______________________________

______________________________

6. 'ಕನಸು ಕಾಣಿರಿ' ಪ್ರೋತ್ಸಾಹಿಸುತ್ತಿದ್ದರು. ಕಲಾಂರವರು ಮಕ್ಕಳಿಗೆ ಎಂದು

______________________________

______________________________

@KTBS NOT TO BE REPUBLISHED

# 10. ಒಗಟುಗಳು

## ಅ. ನಾ ಯಾರೆಂದು ಹುಡುಕು ?



1. ಹಸಿರು ಪುಕ್ಕ : ಕೆಂಪು ಕೊಕ್ಕು
ನೆಟ್ಟ ಕಣ್ಣು : ಊಟ ಹಣ್ಣು
ನಾನು ಯಾರು ಗೊತ್ತೆ?

ಗೊತ್ತು ಗೊತ್ತು ನನಗೆ

ನೀನು



2. ಸೋಗೆ ಗರಿ : ಸೊಗಸು ನಾಟ್ಯ
ರಂಗು ರಂಗು : ನೂರು ಕಣ್ಣು
ನಾನು ಯಾರು ಗೊತ್ತೆ?

@KTBS NOT TO BE REPUBLISHED



3. ದೊಡ್ಡ ದೇಹ, ಮೋಟು ಬಾಲ
ಕಣ್ಣು ಸಣ್ಣ, ಸಂಘಜೀವಿ
ನಾನು ಯಾರು ಗೊತ್ತೆ?

4. ನೀರಿನಲ್ಲಿ ನನ್ನ ವಾಸ
ನನ್ನ ಬೆನ್ನು ಬಹಳ ಗಟ್ಟಿ
ನಡಿಗೆ ಮಾತ್ರ ನಿಧಾನ ನಾನು ಯಾರು ಗೊತೆ ?



5. ಮುಂದಕೆ ಹೋಗಿ, ಹಿಂದಕೆ ಬರುತ್ತೇನೆ. ಹಾಗಾದರೆ ನಾನು ಯಾರು?
(ತಕ್ಕಡಿ, ಜೋಕಾಲಿ, ಗಾಳಿಪಟ)

ಉತ್ತರ :_____________________________________________

6. ದೊಡ್ಡಣ್ಣನ ಹಿಂದೆ ಹತ್ತಾರು ತಮ್ಮಂದಿರು ಊರೆಲ್ಲಾ ಸುತ್ತುತ್ತಾರೆ. ಹಾಗಾದರೆ ನಾನು ಯಾರು?
(ಕಾರು, ಲಾರಿ, ರೈಲು)

ಉತ್ತರ :_____________________________________________

7. ಸಾಗರ ಪುತ್ರ. ಸಾರಿಗೆ ಮಿತ್ರ. ಹಾಗಾದರೆ ನಾನು ಯಾರು?
(ಉಪ್ಪು ನೀರು, ಗೆಳೆಯ)

ಉತ್ತರ :_____________________________________________

8. ಅಟ್ಟದ ಮೇಲೆ ಪುಟ್ಟ ಲಕ್ಷ್ಮಿ. ಹಾಗಾದರೆ ನಾನು ಯಾರು?
(ಬೆಟ್ಟ , ಬೊಟ್ಟು , ಮೆಟ್ಟಿಲು)

ಉತ್ತರ :_____________________________________________

9. ನೀರನು ತರಲು ಹೋಗುವುದಿಲ್ಲ, ನೀರನು ಮುಟ್ಟುವುದೂ ಇಲ್ಲ, ಆದರೂ ನೀರನು ನಾ ತರುತಿರುವೆ. ಹಾಗಾದರೆ ನಾನು ಯಾರು?
(ಕುಂಬಳಕಾಯಿ, ತೆಂಗಿನಕಾಯಿ, ಕಲ್ಲಂಗಡಿ)

ಉತ್ತರ :_____________________________________________

**(ಇವುಗಳನ್ನು 'ಒಗಟು'ಗಳೆಂದು ಕರೆಯುವರು.)**

@KTBS NOT TO BE REPUBLISHED

ಆ. ನಿಮಗೆ ತಿಳಿದಿರುವ ಒಗಟುಗಳನ್ನು ಸಂಗ್ರಹಿಸಿ ಬರೆ.

1. ________________________________________

________________________________________

2. ________________________________________

________________________________________

3. ________________________________________

________________________________________

4. ________________________________________

________________________________________

5. ________________________________________

________________________________________

6. ________________________________________

________________________________________

7. ________________________________________

________________________________________

8. ________________________________________

________________________________________

9. ________________________________________

________________________________________

10. ________________________________________

________________________________________

@KTBS
NOT TO BE REPUBLISHED

ಇ. ನಾನ್ಯಾರೆಂದು ಹುಡುಕು.

ಆಕಾಶ, ನಕ್ಷತ್ರ, ಚಕ್ಕುಲಿ, ಮೊಟ್ಟೆ, ಉಪ್ಪು, ಬಾಚಣಿಗೆ, ಮಲ್ಲಿಗೆ ಹೂ, ಜೋಕಾಲಿ

1. ಸುತ್ತ ಮುತ್ತ ಸುಣ್ಣದ ಗೋಡೆ. ಎತ್ತ ನೋಡಿದರೂ ಬಾಗಿಲ್ಲ. ಹಾಗಾದರೆ ನಾನು ಯಾರು?

______________________________

2. ಹಲ್ಲಿದ್ದರು ಕಚ್ಚೊಲ್ಲ, ನಾನಿಲ್ಲದೆ ನಿಮಗೆ ಶೋಭೆಯಿಲ್ಲ. ಹಾಗಾದರೆ ನಾನು ಯಾರು?

______________________________

3. ಹಸಿರು ಗಿಡದ ಮೇಲೆ ಮೊಸರು ಚೆಲ್ಲಿದೆ. ಹಾಗಾದರೆ ನಾನು ಯಾರು?

______________________________

4. ಅವ್ವನ ಹಾಸಿಗೆ ಸುತ್ತಾಕಾಗೊಲ್ಲ, ಅಪ್ಪನ ದುಡ್ಡು ಎಣಿಸಾಕಾಗೊಲ್ಲ. ಹಾಗಾದರೆ ನಾನು ಯಾರು?

______________________________

5. ಸಾಗರ ಪುತ್ರ, ಸಾರಿಗೆ ಮಿತ್ರ. ಹಾಗಾದರೆ ನಾನು ಯಾರು?

______________________________

6. ಮುಳ್ಳು ಮುಳ್ಳಿನ ಚಕ್ರ, ಗಾಡಿ ಇಲ್ಲದ ಚಕ್ರ, ಮುರಿದು ಮುರಿದು ತಿನ್ನುವ ಚಕ್ರ. ಹಾಗಾದರೆ ನಾನು ಯಾರು?

______________________________

@KTBS NOT TO BE REPUBLISHED

7. ಚಿಕ್ಕ ಮನೇಲಿ ಚುಕ್ಕೆ ತುಂಬಿವೆ.

8. ಒಂಟಿ ಕಾಲಿನ ಕೊಕ್ಕರೆ ಬಗ್ಗಿ ಬಗ್ಗಿ ನೀರು ಕುಡಿಯುತ್ತೇನೆ. ಹಾಗಾದರೆ ನಾನು ಯಾರು?

9. ಹಿಡಿ ಹಿಡಿದರೆ ಹಿಡಿ ತುಂಬಾ! ಬಿಟ್ಟರೆ ಮನೆ ತುಂಬಾ. ಹಾಗಾದರೆ ನಾನು ಯಾರು?

10. ಮೇಲೆ ಹಸಿರು, ಒಳಗೆ ಕೆಂಪು, ತಿಂದರೆ ತಂಪು. ಹಾಗಾದರೆ ನಾನು ಯಾರು?

@KTBS NOT TO BE REPUBLISHED

## ವಿದ್ಯಾರ್ಥಿಗಳ ಸ್ವಯಂ ಮೌಲ್ಯಮಾಪನ

| ಕ್ರ.ಸಂ. | ಕಲಿಕಾ ಸೂಚಕಗಳು | ☺ | 😐 | ☹ |
|---|---|---|---|---|
| 1. | ಒಗಟುಗಳನ್ನು ಬಿಡಿಸುವೆ. | | | |
| 2. | ವಾಕ್ಯಗಳನ್ನು ತಪ್ಪಿಲ್ಲದೆ ಬರೆಯುವೆ. | | | |
| 3. | ವ್ಯಾಕರಣ ಬದ್ಧವಾಗಿ ವಾಕ್ಯ ರಚಿಸುವೆ. | | | |
| 4. | ಚಿತ್ರನೋಡಿ ಪದಗಳನ್ನು ಬರೆಯುವೆ. | | | |

| | | | | | |
|---|---|---|---|---|---|
| ಶಿಕ್ಷಕರ ಅಭಿಪ್ರಾಯ: ಅತ್ಯುತ್ತಮ | | ಉತ್ತಮ | | ಸಾಧಾರಣ | |

# 11. ಕಿರು ಪರೀಕ್ಷೆ – 2

ಅ. ಚಿತ್ರ ನೋಡಿ ವಾಕ್ಯ ಬರೆಯಿರಿ.

1. 

2. 

3. 

4. 

5. 

NOT TO @KTBS BE REPUBLISHED

6.



ಉ. ಕೊಟ್ಟಿರುವ ಅಕ್ಷರಗಳಿಂದ ಪದ ರಚಿಸು.




@KTBS
NOT TO BE REPUBLISHED

1. ______ 2. ______ 3. ______

4. ______ 5. ______ 6. ______

7. ______ 8. ______ 9. ______

10. ______ 11. ______ 12. ______

| | | | | | | |
|---|---|---|---|---|---|---|
| ಶಿಕ್ಷಕರ ಅಭಿಪ್ರಾಯ: ಅತ್ಯುತ್ತಮ | | ಉತ್ತಮ | | ಸಾಧಾರಣ | | |

# 12. ಬರವಣಿಗೆ

ಅ. ಚಿತ್ರ ನೋಡಿ, ಪ್ರಶ್ನೆಗಳಿಗೆ ಉತ್ತರಿಸಿ.



© KTBS NOT TO BE REPUBLISHED

1. ಬಾತುಕೋಳಿಗಳು ಎಲ್ಲಿ ಈಜುತ್ತಿವೆ ?

___________________________

2. ಕಲ್ಲಿನ ಮೇಲೆ ಎಷ್ಟು ಕಪ್ಪೆಗಳು ಇವೆ ?

___________________________

3. ಆಕಾಶದಲ್ಲಿ ಎಷ್ಟು ಪಕ್ಷಿಗಳು ಹಾರಾಡುತ್ತಿವೆ ?

___________________________

4. ಹುಡುಗರು ಎಲ್ಲಿ ಆಟವಾಡುತ್ತಿದ್ದಾರೆ ?

___________________________

5. ಕೊಳದ ಬಳಿ ಯಾವ ಮರವಿದೆ ?

________________________________________

6. ಕೊಳದ ಬಳಿ ಎಷ್ಟು ಬೆಟ್ಟಗಳಿವೆ ?

________________________________________

**ಆ. ಚಿತ್ರ ನೋಡಿ ನಿಮಗನಿಸಿದ್ದನ್ನು ಬರೆಯಿರಿ.**




@KTBS
NOT TO BE REPUBLISHED

________________________________________

________________________________________

________________________________________

________________________________________

ಇ. ಚಿತ್ರ ನೋಡಿ ನಿಮಗನಿಸಿದ್ದನ್ನು ಬರೆಯಿರಿ.



@KTBS NOT TO BE REPUBLISHED

ಈ. ನನ್ನ ಬಗ್ಗೆ ಬರೆಯಿರಿ.



© KTBS NOT TO BE REPUBLISHED

# 13. ಕಥೆ ಓದು



ಅ. ಕಥೆಯನ್ನು ಓದಿ, ನನ್ನ ಪ್ರಶ್ನೆಗಳಿಗೆ ಉತ್ತರಿಸಿ.

**(ಸಹಾಯ)**

ಒಂದು ಕಾಡಿನಲ್ಲಿ ನದಿಯು ಹರಿಯುತ್ತಿತ್ತು. ನದಿಯ ದಡದಲ್ಲಿ ಇರುವೆಯೊಂದು ಹೋಗುತ್ತಿತ್ತು. ಗಾಳಿ ಜೋರಾಗಿ ಬೀಸಿತು. ಇರುವೆ ನದಿಯಲ್ಲಿ ಬಿದ್ದಿತು. ಅಲ್ಲಿಯೇ ಮರದ ಮೇಲೆ ಕುಳಿತಿದ್ದ ಪಾರಿವಾಳವು ಇದನ್ನು ನೋಡಿತು. ಅದಕ್ಕೊಂದು ಉಪಾಯ ಹೊಳೆಯಿತು. ತಕ್ಷಣ ಎಲೆಯೊಂದನ್ನು ಕಿತ್ತಿತು. ಅದನ್ನು ನೀರಿನ ಮೇಲೆ ಇರುವೆಯ ಬಳಿ ಹಾಕಿತು. ಇರುವೆ ಎಲೆಯ ಮೇಲೆ ಹತ್ತಿ ದಡ ಸೇರಿತು. ತನ್ನ ಜೀವವನ್ನು ಉಳಿಸಿಕೊಂಡಿತು. ಪಾರಿವಾಳಕ್ಕೆ ಧನ್ಯವಾದ ಹೇಳಿತು. ಒಂದು ದಿನ ಹಕ್ಕಿಯು ಮರದ ಮೇಲೆ ಕುಳಿತಿತ್ತು. ಬೇಟೆಗಾರನೊಬ್ಬ ಪಾರಿವಾಳಕ್ಕೆ ಗುರಿ ಇಟ್ಟಿದ್ದನು. ಅದನ್ನು ಇರುವೆ ನೋಡಿತು. ಬೇಟೆಗಾರ ಬಾಣ ಬಿಡುವ ಸಮಯಕ್ಕೆ ಸರಿಯಾಗಿ ಬೇಟೆಗಾರನ ಕಾಲನ್ನು ಕಚ್ಚಿತು. ಬೇಟೆಗಾರನ ಗುರಿ ತಪ್ಪಿತು. ಪಾರಿವಾಳದ ಜೀವ ಉಳಿಯಿತು.

1. ಕಾಡಿನಲ್ಲಿ ಏನು ಹರಿಯುತ್ತಿತ್ತು?

______________________________

______________________________

2. ಇರುವೆ ಎಲ್ಲಿ ಹೋಗುತ್ತಿತ್ತು?

______________________________

______________________________

©KTBS NOT TO BE REPUBLISHED

3. ಇರುವೆ ನೀರಿನಲ್ಲಿ ಏಕೆ ಬಿದ್ದಿತು?

4. ಮರದ ಮೇಲೆ ಯಾವ ಪಕ್ಷಿ ಕುಳಿತಿತ್ತು?

5. ಪಾರಿವಾಳಕ್ಕೆ ಗುರಿ ಇಟ್ಟವರು ಯಾರು?

6. ಇರುವೆಯು ಪಾರಿವಾಳಕ್ಕೆ ಏನು ಹೇಳಿತು?

7. ಪಾರಿವಾಳವು ಇರುವೆಯ ಜೀವವನ್ನು ಹೇಗೆ ಉಳಿಸಿತು?

8. ಇರುವೆಯು ಪಾರಿವಾಳಕ್ಕೆ ಹೇಗೆ ಸಹಾಯ ಮಾಡಿತು?

@KTBS
NOT TO BE REPUBLISHED

ಆ. ಕಥೆಯನ್ನು ಓದಿ, ನನ್ನ ಪ್ರಶ್ನೆಗಳಿಗೆ ಉತ್ತರಿಸಿ.

## ಜಾಣತನ

ಒಬ್ಬ ರಾಜನಿದ್ದನು. ಅವನಿಗೊಬ್ಬ ಮಗಳಿದ್ದಳು. ಅವಳು ಬಹಳ ಅಹಂಕಾರಿಯಾಗಿದ್ದಳು. ಆ ರಾಜಕುಮಾರಿಯು ಪ್ರಜೆಗಳಿಗೆಲ್ಲಾ ತುಂಬಾ ಕಷ್ಟ ಕೊಡುತ್ತಿದ್ದಳು. ಕೆಟ್ಟ ಮಾತುಗಳಿಂದ ನೋಯಿಸುತ್ತಿದ್ದಳು. ಆ ಊರಿನಲ್ಲಿ ಬುದ್ಧಿವಂತ ಯುವಕನೊಬ್ಬನಿದ್ದನು. ಹೇಗಾದರೂ ಮಾಡಿ ರಾಜಕುಮಾರಿಗೆ ಬುದ್ಧಿ ಕಲಿಸಬೇಕೆಂದು ತೀರ್ಮಾನಿಸಿದನು. ರಾಜಕುಮಾರಿಯ ಬಳಿ ಬಂದು ಒಂದು ಕೆಲಸ ಕೊಡುವಂತೆ ಕೇಳಿದನು. ಆಗ ರಾಜಕುಮಾರಿ ಒಂದು ಉಂಡೆ ದಾರವನ್ನು ಕೊಟ್ಟಳು. ಇದರಿಂದ ಒಂದು ಸೀರೆಯನ್ನು ನೇಯ್ದುಕೊಂಡು ಬರಲು ತಿಳಿಸಿದಳು. ಆಗ ಯುವಕ ಒಂದು ಚಿಕ್ಕ ಕೋಲನ್ನು ಕೊಟ್ಟನು. ಇದರಿಂದ ಕೈಮಗ್ಗ ಮಾಡಿಸಿ ಕೊಡಿರಿ. ಆಗ ಸೀರೆ ನೇಯಬಲ್ಲೆನೆಂದು ಹೇಳಿದನು. ಇದನ್ನು ಕೇಳಿ ರಾಜಕುಮಾರಿಗೆ ಯುವಕನ ಜಾಣತನ, ಮತ್ತು ತನ್ನ ತಪ್ಪಿನ ಅರಿವಾಗಿ ನಾಚಿಕೆಯಾಯಿತು.

NOT TO BE REPUBLISHED @KTBS

1. ರಾಜನಿಗೆ ಎಂತಹ ಮಗಳಿದ್ದಳು ?

______________________________

______________________________

2. ರಾಜಕುಮಾರಿ ಯಾರಿಗೆ ಕಷ್ಟ ಕೊಡುತ್ತಿದ್ದಳು ?

______________________________

______________________________

3. ರಾಜಕುಮಾರಿಗೆ ಬುದ್ಧಿ ಕಲಿಸಲು ಯಾರು ತೀರ್ಮಾನಿಸಿದರು ?

______________________________

______________________________

4. ಯುವಕ ರಾಜಕುಮಾರಿಯ ಬಳಿ ಬಂದು ಏನು ಕೇಳಿದ ?

5. ರಾಜಕುಮಾರಿ ಯುವಕನಿಗೆ ಯಾವ ಕೆಲಸ ಕೊಟ್ಟಳು ?

6. ಯುವಕ ರಾಜಕುಮಾರಿಗೆ ಏನು ಮಾಡಿಸಿಕೊಡಬೇಕೆಂದು ಕೇಳಿದ ?

7. ರಾಜಕುಮಾರಿಗೆ ಏಕೆ ನಾಚಿಕೆಯಾಯಿತು ?

8. ಈ ಕಥೆಯಲ್ಲಿ ಬರುವ ವಿರುದ್ಧ ಪದಗಳನ್ನು ಪಟ್ಟಿ ಮಾಡಿರಿ.

@KTBS NOT TO BE REPUBLISHED

ಇ. ಚಿತ್ರ ನೋಡಿ ನಿಮಗನಿಸಿದ್ದನ್ನು ಬರೆಯಿರಿ.




© KTBS NOT TO BE REPUBLISHED

ಈ. ಚಿತ್ರಕ್ಕೆ ಹೊಂದಿಕೆಯಾಗುವ ಕಥೆಯನ್ನು ಬರೆಯಿರಿ.



@KTBS
NOT TO BE REPUBLISHED

ಉ. ಕೆಳಗಿನ ಚಿತ್ರವನ್ನು ನೋಡಿ. ನಿಮಗೆ ಅನಿಸಿದ್ದನ್ನು ಈ ಚಿತ್ರದ ಬಗ್ಗೆ ಬರೆಯಿರಿ.



NOT TO BE REPUBLISHED

ಊ. ಕಥೆಗೆ ಸಂಬಂಧಿಸಿದಂತೆ ಸರಳ ಪ್ರಶ್ನೆಗಳನ್ನು ರಚಿಸಿ.

## ಕಾಗೆ ಮತ್ತು ಕೋಗಿಲೆ

ಒಂದು ಆಲದ ಮರ ಇತ್ತು. ಅಲ್ಲಿ ಕಾಗೆಯೊಂದು ಗೂಡು ಕಟ್ಟಿಕೊಂಡು ವಾಸವಾಗಿತ್ತು. ಆಗ ಅದೇ ಮರದ ಮೇಲೆ ಕೋಗಿಲೆಯೊಂದು ನಿರಾಶೆಯಿಂದ ಬಂದು ಕುಳಿತಿತು. ಕೋಗಿಲೆಯನ್ನು ನೋಡಿ ಕಾಗೆಗೆ ಬಹಳ ಆನಂದವಾಯಿತು. ''ಬಾ ಕೋಗಿಲೆ, ಈ ಆಲದ ಮರದಲ್ಲಿ ನಾನಷ್ಟೇ ಇರುವೆನು. ಆದ್ದರಿಂದ ನನಗೆ ಬಹಳ ಬೇಸರವಾಗಿದೆ.



ಗೆಳೆಯರಂತೂ ಯಾರೂ ಇಲ್ಲ, ನೀನೂ ಬಂದರೆ ಇಂದಿನಿಂದ ನಾವು ಗೆಳೆಯರಾಗಿ ಇರೋಣ'' ಎಂದು ಕಾಗೆ ಹೇಳಿತು. ಅದಕ್ಕೆ ಕೋಪಗೊಂಡ ಕೋಗಿಲೆ, ''ಏನೆಂದೆ? ನಾನು ನೀನು ಗೆಳೆಯರಾಗೋಣವೆ ? ಅದು ಎಂದಿಗೂ ಸಾಧ್ಯವಿಲ್ಲ, ನಿನ್ನ ಬಣ್ಣ ನನಗಿಂತ ಹೆಚ್ಚು ಕಪ್ಪು, ಅಲ್ಲದೆ ನಿನ್ನ ಕರ್ಕಶವಾದ ಧ್ವನಿ ಕೇಳಲು ಯಾರೂ ಇಷ್ಟ ಪಡುವುದಿಲ್ಲ, ಹೀಗಿರುವಾಗ ನಾನೆಂದಿಗೂ ನಿನ್ನೊಡನೆ ಗೆಳತನ ಮಾಡಲು ಸಾಧ್ಯವಿಲ್ಲ'' ಎಂದು ಕಾಗೆಯನ್ನು ಹೀಯಾಳಿಸಿತು. ಪಾಪ! ಕಾಗೆ ನಿರಾಶೆಯಿಂದ ಗೂಡಿಗೆ ಮರಳಿತು.

ಹೀಗೆ ಕೆಲವು ದಿನಗಳು ಕಳೆದವು. ಮಳೆಗಾಲ ಪ್ರಾರಂಭವಾಯಿತು. ಆಗ ಒಂದು ಸಲ ಹಗಲುರಾತ್ರಿ ಜೋರಾಗಿ ಧೋಧೋ ಎಂದು ಮಳೆ ಸುರಿಯತೊಡಗಿತು. ಆಗ ಕೋಗಿಲೆ ಆ ಮರದ ಪೊಟರೆಯಲ್ಲಿ ಆಹಾರ ಸಿಗದೆ ಉಪವಾಸದಿಂದ ಕುಳಿತಿತ್ತು. ಆದರೆ ಕಾಗೆ ಧೈರ್ಯಶಾಲಿ, ಸುರಿಯುವ ಮಳೆಗೆ ಅಂಜದೆ, ಅಲೆದಾಡಿ ಆಹಾರ ತಂದಿತು. ಅದಕ್ಕೆ ಕೋಗಿಲೆಯ ನೆನಪಾಯಿತು. ಕೂಡಲೇ ಕೋಗಿಲೆ ಹತ್ತಿರ ಹೋಗಿ, ''ಆಹಾರ ತೆಗೆದುಕೋ, ತಿನ್ನು, ಉಪವಾಸದಿಂದ ಇರುವುದು ಸರಿಯಲ್ಲ'' ಎಂದಿತು.

ಆಗ ಆಹಾರ ತಿಂದ ಕೋಗಿಲೆಯ ಹಸಿವು ದೂರವಾಯಿತು. ಆಗ ಕಾಗೆ ಹತ್ತಿರ ಹೋಗಿ, ''ನನ್ನನ್ನು ಕ್ಷಮಿಸು, ಎಷ್ಟು ನಿಂದಿಸಿದರೂ ಕೂಡ ನೀನು ನನ್ನನ್ನು

© KTBS NOT TO BE REPUBLISHED

ಮರೆಯಲಿಲ್ಲ. ಉಪವಾಸದಿಂದ ಬಳಲುತ್ತಿರುವ ನನಗೆ ಆಹಾರ ಕೊಟ್ಟು ನನ್ನನ್ನು ಬದುಕಿಸಿದೆ. ಉಪಕಾರವಾಯಿತು'' ಎಂದಿತು. ''ಇನ್ನು ಮುಂದೆ ನಾವಿಬ್ಬರೂ ಗೆಳೆಯರಾಗಿ ಇರೋಣ'' ಎಂದು ಸಂತೋಷದಿಂದ ಹೇಳಿತು.

**ಮಾದರಿ ಪ್ರಶ್ನೆ :** ಕೋಗಿಲೆ ಯಾರ ಬಳಿ ಹೋಗಿ ಕ್ಷಮೆ ಕೇಳಿತು?

1. ______________________________

2. ______________________________

3. ______________________________

4. ______________________________

5. ______________________________

6. ______________________________

@KTBS NOT TO BE REPUBLISHED

## ವಿದ್ಯಾರ್ಥಿಗಳ ಸ್ವಯಂ ಮೌಲ್ಯಮಾಪನ

| ಕ್ರ.ಸಂ. | ಕಲಿಕಾ ಸೂಚಕಗಳು | ☺ | 😐 | ☹ |
|---|---|---|---|---|
| 1. | ಕಥೆಗಳ ಘಟನೆಗಳನ್ನು ನನ್ನ ಜೀವನಕ್ಕೆ ಹೋಲಿಸುವೆ. | | | |
| 2. | ಕಥೆಗಳನ್ನು ಓದಿ, ಅಭ್ಯೈಸುವೆ. | | | |
| 3. | ಅಪೂರ್ಣ ಕಥೆಗಳನ್ನು ಪೂರ್ಣಗೊಳಿಸುವೆ. | | | |
| 4. | ಚಿತ್ರನೋಡಿ ಪದಗಳನ್ನು ಬರೆಯುವೆ | | | |
| 5. | ದಿನಪತ್ರಿಕೆಗಳನ್ನು ಸ್ಪಷ್ಟವಾಗಿ ಓದುವೆ. | | | |

| ಶಿಕ್ಷಕರ ಅಭಿಪ್ರಾಯ: ಅತ್ಯುತ್ತಮ | | ಉತ್ತಮ | | ಸಾಧಾರಣ | |
|---|---|---|---|---|---|

# 14. ಕಿರು ಪರೀಕ್ಷೆ – 3

ಅ. ಕೆಳಗಿನ ಸುಳುಹುಗಳನ್ನು ಬಳಸಿಕೊಂಡು ಕಥೆ ಬರೆಯಿರಿ

ಹಳ್ಳಿ, ಕುರಿ, ಗುಡ್ಡ, ಭೈರ, ಕಾಯುವವನು, ತಮಾಷೆ, ರೈತರು, ತೋಳ, ಕೆಲಸ ಜಮೀನು, ಕೋಲು, ಆಳು, ಮೋಸ, ಧಾವಿಸಿ, ನಗು, ನಿಜವಾಗಿ, ಬೈದು, ಗಾಬರಿ, ಎತ್ತಿಕೊಂಡು, ಹೋಗು, ನೆನಪಿಸಿಕೊಂಡು, ಸುಳ್ಳು, ಬಂದಿದೆ

@KTBS
NOT TO BE REPUBLISHED

ಆ. ಕೆಳಗಿನ ಚಿತ್ರವನ್ನು ನೋಡಿ. ನಿಮಗೆ ಅನಿಸಿದ್ದನ್ನು ಈ ಚಿತ್ರದ ಬಗ್ಗೆ ಬರೆಯಿರಿ.



@KTBS NOT TO BE REPUBLISHED

| ಶಿಕ್ಷಕರ ಅಭಿಪ್ರಾಯ: ಅತ್ಯುತ್ತಮ | | ಉತ್ತಮ | | ಸಾಧಾರಣ | |
|---|---|---|---|---|---|